ಮರಗಳು ಉರುಳಿವೆ. ಟೆಲಿಫೋನ್ ತಂತಿಗಳು ಕಡಿದು ಹೋಗಿವೆ. ಒಂದು ಸ್ಥಳಕ್ಕೆ ಇನ್ನೊಂದು ಸ್ಥಳದಿಂದ ಸುದ್ದಿ ತಿಳಿಯುವುದು ಸಹ ಅಸಂಭವ. ಮುಂದಿನ ನಿಲ್ದಾಣದಲ್ಲಿ ರೈಲು ರಾತ್ರಿಗೆ ನಿಂತುಬಿಡುತ್ತದೆ. ಚಂಡಮಾರುತ ಬಹಳ ತೀವ್ರವಾಗಿರುವುದೆಂದು, ಮುಂದಿನ ಮೂವತ್ತಾರು ಗಂಟೆಗಳವರೆಗೆ ಇಳಿಮುಖವಾಗದೆಂದು ನಮಗೆ ಸುದ್ದಿ ಬಂದಿದೆ.'

'ಆದರೆ ನಿಲ್ದಾಣದಲ್ಲಿ ಇನ್ನಾರೂ ಇಲ್ಲವಲ್ಲ.'

'ನಾನೇನು ಮಾಡಲಿ? ಹೇಗೋ ನೀವು ನಿಲ್ದಾಣದಲ್ಲೇ ಇರಬೇಕು.'

ಸ್ಟೇಷನ್ ಮಾಸ್ಟರ್ ಹೊರಟು ಹೋದರು. ರಾವು ಅವರು ನಿರೀಕ್ಷಣಾ ಕೋಣೆಗೆ ಹೋದರು. ಒರಗು ಕುರ್ಚಿಯಲ್ಲಿ ಕುಸಿದರು. ಕೋಣೆಯ ಬಾಗಿಲುಗಳನ್ನು ಮುಚ್ಚಿದರೆ ಗಾಳಿಮಳೆ ಒಳಗೆ ಬಾರದೆ ಇರುವುದೆಂದು ಅವರಿಗೆ ತೋಚಲಿಲ್ಲ. ಎರಡು ಕಿಟಕಿ ಬಾಗಿಲುಗಳು ಚೂರುಚೂರಾದವು. ಹೆಂಚುಗಳು ಹಾರಿ ಹೋದವು. ಯಾವುದೋ ಕ್ರೂರಶಕ್ತಿಗಳು ವಿಜೃಂಭಿಸಿ, ಮಾನವ ಸೃಷ್ಟಿಸಿದವು, ದೇವರು ಸೃಷ್ಟಿಸಿದವು ಸಹ ಭೂಮಿಯ ಮೇಲೆ ಇರದಂತೆ ಮಾಡಲು ತೊಡಗಿರುವಂತೆ ಅನ್ನಿಸುತ್ತಿತ್ತು.

ಈ ಗೊಂದಲದಲ್ಲಿ ಮನಸ್ಸಿಗೆ ಸ್ಥೈರ್ಯ ಒದಗಿಸುವ ವೇದಾಂತವಾವುದೂ ರಾವು ಅವರಿಗೆ ಹೊಳೆಯಲಿಲ್ಲ. ಶಿಸ್ತು, ನಿಯಮಗಳು, ಮೌಲ್ಯಗಳೆಲ್ಲವೂ ಮಾನವಾತೀತವಾದ ಕೆಲವು ಶಕ್ತಿಗಳು ವಿಜೃಂಭಿಸಿದಾಗ ಅರ್ಥರಹಿತವಾಗಿ ಹೋಗುವುವೆಂದು ಅವರಿಗೆ ಜೀವನದಲ್ಲಿ ಮೊದಲ ಬಾರಿಗೆ ಅನುಭವಕ್ಕೆ ಬಂದಿತು. ಪ್ರಕೃತಿ ಕೆರಳಿ ಸರ್ವವಿನಾಶಕ್ಕೆ ಒಗ್ಗೂಡಿದ್ದಾದರೆ ಮಾನವನು ತನ್ನ ತಾನು ಹೇಗೆ ರಕ್ಷಿಸಿಕೊಳ್ಳಬಲ್ಲ? ಎಂದೂ ಅರಿಯದ ಭೀತಿ ಅವರ ಮನಸ್ಸನ್ನು ಆವರಿಸಿತು. ಆ ವೇದನೆ ದುರ್ಭರವಾಗಿತ್ತು. ಸುತ್ತಮುತ್ತಲೆಲ್ಲಿಯೂ ಮಾನವ ಹೃದಯವೆಂಬುದಿರಲಿಲ್ಲ. ನಿಲ್ದಾಣ ಭೀತಿ ಹುಟ್ಟಿಸುವಂತಿದ್ದು, ಚಂಡಮಾರುತ ಉಗ್ರರೂಪ ತಳೆಯಿತು. ಅವರ ಮನಸ್ಸು ಒಂದು ಕೆಟ್ಟಕನಸಿನಲ್ಲಿ ಸಿಕ್ಕಿಕೊಂಡಂತೆ ತಬ್ಬಿಬ್ಬುಗೊಂಡಿತು. ಆ ಕೋಣೆಯಲ್ಲಿ ಇನ್ನೊಂದು ವಸ್ತುವಾವುದೋ ಇದ್ದಂತೆ ರಾವು ಅವರಿಗೆ ಕಂಡಿತು. ತೆರೆದ ಬಾಗಿಲಿನಿಂದ ಒಳಕ್ಕಾವುದೋ ಪ್ರವೇಶಿಸಿದಂತೆ, ಅವರು ಕೈಲಿದ್ದ ಟಾರ್ಚನ್ನು ಬೆಳಗಿಸಿ ಅತ್ತ ನೋಡಿದರು. ತಿರುಕಿ ಗಡಗಡ ನಡುಗುತ್ತ, ನೀರು ಸುರಿಸುತ್ತ ಒಂದು ಮೂಲೆಯಲ್ಲಿ ನಿಂತಿದ್ದಳು. ಅವಳ ಒದ್ದೆ ಕೂದಲು ಮುಖಕ್ಕೆ ಕೆನ್ನೆಗಳಿಗೆ ಅಂಟಿಕೊಂಡಿದ್ದವು. ಅವುಗಳಿಂದ ನೀರು ಸುರಿಯುತ್ತಿತ್ತು.

'ಅಯ್ಯಾ, ಬಾಗಿಲು ಮುಚ್ಚಲಿಲ್ಲವಲ್ಲ! ಕೊಂಚ ಬೆಚ್ಚಗಿರುತ್ತೆ' ಅಂದಳು, ಗಂಟಲು ದೊಡ್ಡದು ಮಾಡಿ. ಅವರು ಒಂದು ಯಂತ್ರದಂತೆ ಎದ್ದು ಬಾಗಿಲು ಮುಚ್ಚಲು ಪ್ರಯತ್ನಿಸಿ ವಿಫಲರಾದರು. ಅವಳು ಸಹಾಯ ಮಾಡಿದಳು. ಹೇಗೋ ಬಾಗಿಲು ಮುಚ್ಚಿ ಒಳಗೆ ಅಗುಳಿ ಹಾಕಿದರು. ಆದರೆ ಗಾಳಿ ಒಮ್ಮೆಲೆ ದೂಡಿತು. ಅಗುಳಿ ಕಳಚಿತು. ಮತ್ತೆ ಇಬ್ಬರೂ ಬಾಗಿಲು ಮುಚ್ಚಿ, ಕೊಠಡಿಯಲ್ಲಿದ್ದ ಮರದ ಸಾಮಾನುಗಳನ್ನೆಲ್ಲ, ಕೆಲವು ಕುರ್ಚಿಗಳು, ಒಂದು ಬೀರು, ಭಾರವಾದ ಡ್ರಾಯರನ್ನು ಬಾಗಿಲಿಗೆ ಅಡ್ಡಲಾಗಿ ಇರಿಸಿದರು. ಬಾಗಿಲು ಮುಚ್ಚಲು ತನಗೆ ತೋಚದೆ ಹೋದುದು ರಾವು ಅವರಿಗೆ ವಿಚಿತ್ರವೆನ್ನಿಸಿತು.

ಈಗ ಕೊಂಚ ಬೆಚ್ಚಗಿತ್ತು. ಭಯ ತಗ್ಗಿತು. ಎಲ್ಲಿಯೋ ದೊಡ್ಡ ಶಬ್ದವಾಯಿತು. ಏನೋ ಬಿದ್ದಿದೆ. ನಿಲ್ದಾಣದ ಒಳಗೇ ಬಿದ್ದಿತೇನೊ?

'ಏನು ಗಾಳಿಮಳೆ ಅಯ್ಯಾ! ನಾನು ಹುಟ್ಟಿದಂದಿನಿಂದ ಇಷ್ಟು ಗಾಳಿಮಳೆಯನ್ನು ಕಂಡಿದ್ದಿಲ್ಲ' ಅಂದಳು ತಿರುಕಿ, ಕೊರಳಲ್ಲಿ ಯಾವ ಅಳುಕಿಲ್ಲದೆ.

ಅವಳಷ್ಟು ಪ್ರಶಾಂತಳಾಗಿ ಹೇಗೆ ಮಾತನಾಡುವಳೋ ಅವರಿಗೆ ಅರ್ಥವಾಗಲಿಲ್ಲ. ಅವಳತ್ತ ಟಾರ್ಚ್ ಹಾಕಿ ನೋಡಿದರು. ಚಳಿಯಿಂದಾಗಿ ನಡುಗುತ್ತ ಮೂಲೆಯಲ್ಲಿ ಮುದುಡಿ ಕುಳಿತಿದ್ದಳು. ರಾವು ಅವರು ಪೆಟ್ಟಿಗೆ ತೆರೆದು ತಮ್ಮ ಪಂಚೆಯೊಂದನ್ನು ತೆಗೆದು ಅವಳತ್ತ ಎಸೆದು, 'ಒದ್ದೆ ಬಟ್ಟೆ ಬಿಟ್ಟು ಇದನ್ನು ಉಟ್ಟುಕೊ' ಅಂದರು. ಅವರು ಹೇಳಿದ್ದೇನೂ ಅವಳಿಗೆ ಕೇಳಿಸಲಿಲ್ಲ. ಆದರೆ ಒಣಬಟ್ಟೆ ಕೊಟ್ಟಿದ್ದಕ್ಕೆ ಕೃತಜ್ಞತೆ ತೋರಿಸುತ್ತ ಬಟ್ಟೆ ಬದಲಿಸಿದಳು. ಆ ಮೂಲೆಯಲ್ಲೆ ತೇವವಿಲ್ಲದ ಜಾಗದಲ್ಲಿ ಕುಳಿತಳು. ರಾವು ಅವರಿಗೆ ಹಸಿವೆಯಾಗುತ್ತಿರುವಂತೆ ನೆನಪಾಯಿತು. ಪೆಟ್ಟಿಗೆ ತೆರೆದು ಅದರಲ್ಲಿದ್ದ ಬಿಸ್ಕತ್ತು ಪೊಟ್ಟಣ ತೆಗೆದು ಒಂದೊಂದಾಗಿ ತಿನ್ನತೊಡಗಿದರು.

ಅಲ್ಲಿಯೇ ಕುಳಿತಿದ್ದ ಅವಳ ಮುಖದತ್ತ ನೋಡಿದರು. ಅವಳಿಗೂ ಹಸಿವೆ ಆಗುತ್ತಿದೆಯೇನೋ ಎಂದು ಅವರಿಗೆ ಅನ್ನಿಸಿತು.